**ಇ ಪಿ ನಂ. 21/2018 ಆರ್.ಡಬ್ಲ್ಯೂ ಃ 1**

ದಿಃ 24.11.2018 ರಂದು ಸಾಕ್ಷಿದಾರರಿಗೆ ಸತ್ಯಪ್ರತಿಜ್ಞೆಯನ್ನು ಭೋದಿಸಲಾಯಿತು.

ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಜಂಬಣ್ಣ ವಕೀಲರಿಂದಃ-

ನಾನು ನಂದಿಬೇವೂರು ಊರಿನಲ್ಲಿ ವಾಸಿಸುತ್ತೇನೆ. ನಾನು ವ್ಯವಸಾಯ ಮಾಡುತ್ತೇನೆ. ಮೊದಲು ಕೆ ಎಸ್ ಆರ್ ಟಿ ಸಿಯಲ್ಲಿ ಕೆಲಸ ಮಾಡುತ್ತಿದ್ದೆ. ಚನ್ನಬಸ್ಸಪ್ಪ ನನ್ನ ಚಿಕ್ಕಪ್ಪ ನಾಗಬೇಕು. ಅವರಿಗೆ 7 ಜನ ಮಕ್ಕಳು. ಚನ್ನಬಸ್ಸಪ್ಪನವರಿಗೆ 2 ಜನ ಹೆಂಡತಿಯರು. ಮೊದಲನೆ ಹೆಂಡತಿಯ ಹೆಸರು ಬೆಟ್ಟಮ್ಮ, 2ನೇ ಹೆಂಡತಿಯ ಹೆಸರು ದ್ರಾಕ್ಷಾಯಣಮ್ಮ. ಹಿರೇ ಹೆಂಡತಿ ಬೆಟ್ಟಮ್ಮರವರಿಗೆ ಒಬ್ಬ ಮಗಳಿದ್ದಾಳೆ ಆಕೆಯ ಹೆಸರು ಸಹ ಬೆಟ್ಟಮ್ಮ. ಆಕೆಯನ್ನು ನನ್ನ ಅಸಲು ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. ದಾವಾ ಸ್ವತ್ತು ಭೂ ನ್ಯಾಯ ಮಂಡಳಿಯಲ್ಲಿ ಮಂಜೂರಾಗುವ ಮೊದಲು ಅದು ನಮ್ಮ ಆಸ್ತಿ ಆಗಿತ್ತು. ನಾನು ನಂದಿಬೇವೂರು ಗ್ರಾಮದಲ್ಲಿ ಹುಟ್ಟಿ ಬೆಳೆದಿದ್ದೇನೆ. ಚನ್ನ ಬಸ್ಸಪ್ಪನವರು ಭೂ ನ್ಯಾಯಮಂಡಳಿಯಲ್ಲಿ ಘೋಷಣೆ ನೀಡುವ ಕಾಲಕ್ಕೆ ನಮ್ಮ ಕುಟುಂಬ ದಾವಾಸ್ವತ್ತಿನಲ್ಲಿ ಇರಲಿಲ್ಲ. ಚನ್ನಬಸ್ಸಪ್ಪನವರೇ ಇದ್ದರು. ಆ ಕಾಲದಿಂದಲೂ ಚನ್ನಬಸ್ಸಪ್ಪನವರ ತಮ್ಮ ಕುಟುಂಬದ ಆಸ್ತಿಗಳನ್ನು ಹಣದ ಗುತ್ತಿಗೆ ಆಧಾರದಲ್ಲಿ ಬೇರೆಯವರಿಗೆ ಉಳುಮೆ ಮಾಡಲು ಕೊಡುತ್ತಿದ್ದರು. ರೇಣುಕಮ್ಮ ಮತ್ತು ಮಂಜುನಾಥ ರವರಿಗೆ ಚನ್ನಬಸ್ಸಪ್ಪನವರು ಹಣ ಗುತ್ತಿಗೆಯನ್ನು ದಾವಾ ಸ್ವತ್ತನ್ನು ಕೊಟ್ಟಿದ್ದರು ಎಂದರೆ ಆಕೆ ಯಾರೆಂದು ನನಗೆ ಗೊತ್ತಿಲ್ಲಾ ಎನ್ನುತ್ತಾರೆ. ನಾವು ದಾವಾ ಸಲ್ಲಿಸುವ ಕಾಲಕ್ಕೆ ಮತ್ತು ದಾವೆಯು ಡಿಕ್ರಿಯಾಗುವ ಕಾಲಕ್ಕೆ ಚನ್ನಬಸ್ಸಪ್ಪನವರೇ ದಾವಾ ಸ್ವತ್ತನ್ನು ಉಳುಮೆ ಮಾಡುತ್ತಿದ್ದರು. ನಾವು ಮೊದಲಿನಿಂದಲೂ ಅಡವಿಮಲ್ಲನಕೇರಿಗೆ ಹೋಗಿ ಬಂದು ಮಾಡುತ್ತಿದ್ದೆವು. ಅಲ್ಲಿ ನಮಗೆ ಮನೆಗಳು ಸಹ ಇದ್ದವು. ನಾವು ಅಡವಿಮಲ್ಲನಕೇರಿಗೆ ಹೋಗುತ್ತಿದ್ದ ಕಾಲಕ್ಕೆ ರೇಣುಕಮ್ಮ ಸ್ವತ್ತಿನ ಸ್ವಾಧೀನದಲ್ಲಿ ಇದ್ದ ವಿಚಾರ ತಿಳಿದುಕೊಂಡಿದ್ದೀರಾ ಎಂದರೆ ಆಕೆ ಯಾರು ಅನ್ನೋದೇ ನನಗೆ ಗೊತ್ತಿಲ್ಲಾ ಎನ್ನುತ್ತಾರೆ. ದಾವಾ ಸ್ವತ್ತಿನಲ್ಲಿ ರೇಣುಕಮ್ಮಳಾ ಗಂಡ ಬಸ್ಸಪ್ಪ ಮೊದಲು ಸ್ವಾಧೀನದಲ್ಲಿ ಇದ್ದ ವಿಚಾರಮೊದಲು ಗೊತ್ತಾ ಎಂದರೆ ಅದರ ವಿಚಾರ ನನಗೆ ಗೊತ್ತಿಲ್ಲಾ ಎನ್ನುತ್ತಾರೆ. ನಾವು ದಾವೆ ಸಲ್ಲಿಸುವ ಕಾಲಕ್ಕೆ ರೇಣುಕಾಮ್ಮಳಾ ಗಂಡನೇ ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇದ್ದರು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರಿದು ಚನ್ನಬಸ್ಸಪ್ಪನವರ ಸ್ವಾಧೀನದಲ್ಲಿ ಇದ್ದರು ಎನ್ನುತ್ತಾರೆ. ಮೂಲ ದಾವೆ ಸಲ್ಲಿಸುವ ಕಾಲಕ್ಕೆ ಮಾಹಿತಿಯನ್ನು ನಾನು ನೀಡಿರುತ್ತೇನೆ. ನಾವು ಸಲ್ಲಿಸುವ

ಅಸಲಿ ದಾವಾ ಕಾಲಕ್ಕೆ ಇದ್ದಂತ ವಸ್ತುಸ್ಥಿತಿಯನ್ನು ಮುಚ್ಚಿಟ್ಟು ಸುಳ್ಳು ದಾವೆ ಸಲ್ಲಿಸಿ ಡಿಕ್ರಿ ಪಡೆದುಕೊಂಡಿದ್ದೇವೆಂದರೆ ಸರಿಯಲ್ಲ. ದಾವಾ ಸಲ್ಲಿಸುವ ಕಾಲಕ್ಕೆ 1ನೇ ಅರ್ಜಿದಾರರ ಗಂಡ ಬಸ್ಸಪ್ಪನೇ ಸ್ವಾಧೀನದಲ್ಲಿ ಇದ್ದರು ಎಂದರೆ ಸರಿಯಲ್ಲ. ದಾವಾ ಸಲ್ಲಿಸುವ 15 ವರ್ಷಗಳ ಮೊದಲಿನಿಂದಲೂ ಬಸ್ಸಪ್ಪನವರೇ ಸ್ವಾದೀನದಲ್ಲಿ ಇದ್ದು ಈ ವಿಚಾರ ನಮ್ಮ ಕುಟುಂಬಕೂ ಮತ್ತು ಚನ್ನಬಸ್ಸಪ್ಪ ನವರ ಕುಟುಂಬಕ್ಕೆ ಗೊತ್ತಿತ್ತು ಎಂದರೆ ಸರಿಯಲ್ಲ. ಸದರಿ ವಿಚಾರ ಗೊತ್ತಿದ್ದರಿಂದಲೇ ನಾವು ಮತ್ತು ಚನ್ನಬಸ್ಸಪ್ಪ ಸೇರಿ ಸುಳ್ಳು ದಾವೆಯನ್ನು ಸಲ್ಲಿಸಿದ್ದೇವೆಂದರೆ ಸರಿಯಲ್ಲ. ಡಿಕ್ರಿಯ ಆದೇಶದನ್ವಯ ದಾವಾ ಸ್ವತ್ತಿನ ಸ್ವಾದೀನ ತೆಗೆದುಕೊಳ್ಳಲು ನಾವು ಪ್ರಯತ್ನಿಸಿದ್ದೇವು ಎಂದರೆ ಸರಿ. ಆ ಕಾಲಕ್ಕೆ ನಮ್ಮ ಮತ್ತು ಚನ್ನಬಸ್ಸಪ್ಪ ನವರ ಕುಟುಂಬದ ನಡುವೆ ಕ್ರಿಮಿನಲ್ ಮೊಕದ್ದಮೆಗಳು ಸಹ ದಾಖಲಾಗಿದ್ದವು ಎನ್ನುತ್ತಾರೆ. ಕ್ರಿಮಿನಲ್ ಮೊಕದ್ದಮೆಯನ್ನು ದಾವೆಯಲ್ಲಿ ಹಾಜರುಪಡಿಸಿದ್ದೇನೆ. ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸದೇ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಡಿಕ್ರಿಯ ಆದೇಶದಂತೆ ಸ್ವಾಧೀನ ಬಿಡುವಂತೆ ನಾವು ಮತ್ತು ಚನ್ನಬಸ್ಸಪ್ಪನವರು ಬಸ್ಸಪ್ಪನವರಿಗೆ ಕೇಳಿದ್ದೆವು ಎಂದರೆ ಸರಿಯಲ್ಲ. ದಾವೆ ಸಲ್ಲಿಸುವ ಮೊದಲೇ ಪಂಚಾಯತಿ ಮಾಡಿ ಪಂಚಾಯತಿಯಲ್ಲಿ ಬಸ್ಸಪ್ಪನನ್ನು ಕರೆಯಿಸಿ ಸ್ವಾಧೀನ ಬಿಡುವಂತೆ ಬೆದರಿಕೆ ಹಾಕಿಸಿದ್ದೆವು ಎಂದರೆ ಸರಿಯಲ್ಲ. ಬಸ್ಸಪ್ಪನ ಜೀವಿತ ಕಾಲಕ್ಕೆ ಸ್ವತ್ತನ್ನು ಅಭಿವೃದ್ಧಿ ಪಡಿಸಿರುವುದರಿಂದ ಸ್ವಾಧೀನ ಬಿಡುವುದಿಲ್ಲವೆಂದು ತಕರಾರು ಮಾಡಿದ್ದರು ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಸ್ಥಳೀಯ ಜನರೂ ಈಗಲೂ ಸಹ ರೂಢಿಯಂತೆ ಮಾದರ ಬಸ್ಸರ ಹೊಲ ಅಂತಾ ಕರೆಯುತ್ತಾರೆ ಎಂದರೆ ಸರಿಯಲ್ಲ. ದೊಡ್ಡ ಹೊಲ ಎಂದು ಕರೆಯುತ್ತಾರೆ. ದೊಡ್ಡ ಹೊಲವನ್ನು ಮಾದರ ಬಸ್ಸಪ್ಪ ಮಾಡುತ್ತಾನೆ ಅಂತಾ ಊರಿನಲ್ಲಿ ಮಾತನಾಡುತ್ತಾರೆ ಎಂದರೆ ಸರಿಯಲ್ಲ.

**ಮುಂದುವರಿದ ಪಾಟೀಸವಾಲಿಗೆ ಸಮಯ ಕೋರಿದ್ದು ನೀಡಿಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಹಿರಿಯ ಸಿವಿಲ್ ನ್ಯಾಯಾಧೀಶರು,
ಹೂವಿನಹಡಗಲಿ.